ಸಿಸಿ ನಂಃ 4102/2023
ಸಿ.ಡಬ್ಲೂ – 7
ಪಿ.ಡಬ್ಲೂ –7

# 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

| | | |
|---|---|---|
| ಸಾಕ್ಷಿದಾರರ ಹೆಸರು | : | ಗಣೇಶ |
| ತಂದೆಯ ಹೆಸರು | : | ಬಾಬುರಾವ ಕಾಂಬಳೆ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಮುಖ್ಯ ಪೇದೆ ಕಲಘಟಗಿ ಪೋಲಿಸ್ ಠಾಣೆ |
| ವಾಸ ಸ್ಥಳ | : | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :05-01-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

2019 ರಿಂದ 2022 ರವರೆಗೆ ಧಾರವಾಡ ಗ್ರಾಮೀಣ ಠಾಣೆಯಲ್ಲಿ ಎಚ್.ಸಿ ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕಃ 20-09-2022 ರಂದು ನಾನು ಕರ್ತವ್ಯದಲ್ಲಿದ್ದಾಗ ಆಗ ನಮ್ಮ ಮೇಲಾಧಿಕಾರಿಗಳು ನನಗೆ ಮತ್ತು ಚಾಸಾ-6 ರವರಿಗೆ ಚಾಸಾ.1 ರವರ ಜೊತಗೆ ಹೋಗಲು ತಿಳಿಸಿದರು ಆ ಪ್ರಕಾರ ನಾವು ಮಧ್ಯಾಹ್ಣ 12.00 ನಾವು ಖಾಸಗಿ ವಾಹನದಲ್ಲಿ ಎರಿಕೊಪ್ಪ ಕ್ರಾಸ ಹೋದೆವು. ಅಲ್ಲಿ ಒಂದು ಆಟೋ ಅಕ್ಕಿ ಚೀಲ ತುಂಬಿಕೊಂಡು ಹುಬ್ಬಳ್ಳಿ ಕಡೆಗೆ ಹೋಗುತ್ತಿತ್ತು. ಸದರಿಯವರು ನಮ್ಮನ್ನು ನೋಡಿ ಎರಿಕೊಪ್ಪ ಗ್ರಾಮದ ಕಡೆಗೆ ಹೋದರು. ನಂತರ ನಾವು ಎರಿಕೊಪ್ಪ ಗ್ರಾಮಕ್ಕೆ ಹೋದಾಗ ಅಂಗನವಾಡಿ ಹತ್ತಿರ ಸದರಿ ಆಟೋ ನಿಂತಿತ್ತು

ಸಿಸಿ ನಂಃ 4102/2023
ಸಿ.ಡಬ್ಲೂ – 7
ಪಿ.ಡಬ್ಲೂ –7

ಸದರಿ ಆಟೋ ಸಂಖ್ಯೆ ಕೆಎ 63/ 1653. ಸದರಿ ಆಟೋ ಚಾಲಕನ ಹೆಸರು ವಿಚಾರಿಸಿದಾಗ ಮೌಲಾಲಿ ಗುಂದಕಲ್ಲ ಎಂದು ಹೇಳಿದ. ಸದರಿ ಆಟೊದಲ್ಲಿ 5 ಚೀಲ ಅಕ್ಕಿ ಇತ್ತು. ಸದರಿ ಅಕ್ಕಿಯನ್ನು ಎಲ್ಲಿಂದ ತಂದೆ ಎಂದು ವಿಚಾರಿಸಿದಾಗ ಚಾಲಕನು ಅದನ್ನು ಧಾರವಾಡದ ಸಂತೆಯಲ್ಲಿ ಸಾರ್ವಜನಿಕರಿಂದ ಖರೀದಿ ಮಾಡಿದ್ದಾನೆ ಎಂದು ಹೇಳಿದ. ಸದರಿ ಅಕ್ಕಿ ಸರಕಾರಿ ವಿತರಿಸುವ ಅಕ್ಕಿಯಂದು ಚಾಸಾ–1 ರವರು ದೃಡಿಕರಿಸಿ ನಂತರ ಚಾಸಾ–8 ರವರ ಮೂಲಕ ಸದರಿ ಅಕ್ಕಿಯನ್ನು ತೂಕ ಮಾಡಿಸಿರುತ್ತಾರೆ. 2 ಕ್ವಿಂಟಲ 40 ಕೆ ಜಿ ಅಕ್ಕಿ ಇತ್ತು ಅದರ ಅ.ಕಿ. 5280/– ಇತ್ತು. ಸದರಿ ಅಕ್ಕಿ ಚೀಲಗಳನ್ನು ಹಾಗೂ ಆಟೋ ಪಂಚನಾಮೆ ಮೂಲಕ ಜಪ್ತು ಪಡಿಸಿಕೊಂಡಿರುತ್ತಾರೆ ಆ ಸಮಯದಲ್ಲಿ ನಾನು ಹಾಜರಿದ್ದೆ. ಜಪ್ತು ಪಡಿಸಿದ ವಸ್ತುಗಳನ್ನು ಚಾಸಾ–10 ರವರು ಸಲ್ಲಿಸಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿರುತ್ತೆನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ನಾವು ನಮ್ಮ ಕರ್ತವ್ಯದ ದಿನಚರಿಯನ್ನು ಡೈರಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ಅದೇ ರೀತಿ ಯಾವುದೇ ಮಾಹಿತಿ ಬಂದರೆ ಸದರಿ ಮಾಹಿತಿಯನ್ನು ಮತ್ತು ಮಾಹಿತಿ ಕೊಟ್ಟ ವ್ಯಕ್ತಿಯ ವಿವರವನ್ನು ಡೈರಿಯಲ್ಲಿ ನಮೂದು ಮಾಡಬೇಕು ಎಂದರೆ ಸರಿ. ಅದೇ ರೀತಿ ದಾಳಿಗೆ ಹೋದಾಗ ಹಾಗೂ ಪಟ್ರೋಲಿಂಗ್ ಹೋದಾಗ ಬಂದ ನಂತರ ವಿವರವನ್ನು ಬರೆಯಬೇಕು ಎಂದರೆ ಸರಿ.

ಸಿಸಿ ನಂಃ 4102/2023
ಸಿ.ಡಬ್ಲೂ – 7
ಪಿ.ಡಬ್ಲೂ –7

ಚಾಸಾ–1 ಮತ್ತು 10 ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ನಾನು ಯಾವುದೇ ದಾಳಿಗೆ ಹೋಗದೇ ಇದ್ದರು ಸಹ ಚಾಸಾ–1 ಮತ್ತು 10 ರವರ ನಿರ್ದೇಶನದಂತೆ ಸುಳ್ಳು ಹೇಳಿಕೆ ಕೊಟ್ಟಿದ್ದೆನೆ ಎಂದರೆ ಸರಿಯಲ್ಲ. ನಾವು ಠಾಣೆಯಿಂದ ಕರ್ತವ್ಯಕ್ಕೆ ನಮ್ಮ ವಾಹನದಲ್ಲಿ ಹೋಗುತ್ತೇವೆ ಎಂದರೆ ಸರಿ. ಸದರಿ ವಾಹನದ ಬಗ್ಗೆ ಲಾಗ್ ಬುಕ್ಕದಲ್ಲಿ ಬರೆಯಬೇಕು ಎಂದರೆ ಸರಿ. ಆ ದಿನ ನಾವು ಖಾಸಗಿ ವಾಹನದಲ್ಲಿ ಹೋಗಿದ್ದೆವು ಎಂದು ಲಾಗ್ ಬುಕ್ಕದಲ್ಲಿ ನಮೂದು ಮಾಡಿಲ್ಲ ಮತ್ತು ನನ್ನ ಹೇಳಿಕೆಯಲ್ಲಿ ಸಹ ವಾಹನದ ಸಂಖ್ಯೆ ಬರೆಸಿಲ್ಲ ಎಂದರೆ ಸರಿ ಅದೆ ರೀತಿ ನಾನು ನನ್ನ ಹೇಳಿಕೆಯಲ್ಲಿ ತೂಕ ಮಾಡಿದವರ ಹೆಸರು ಹಾಗೂ ಪಂಚರ ಹೆಸರು ಬರೆಸಿಲ್ಲ ಎಂದರೆ ಸಾಕ್ಷಿ ತೂಕ ಮಾಡಿದವರ ಹೆಸರು ಬರೆಸಿರುತ್ತೇನೆ ಎಂದು ಹೇಳುತ್ತಾರೆ. ಅದೇ ರೀತಿ ಪಂಚನಾಮೆಯನ್ನು ಯಾರು ಬರೆದರು ಎಂದು ಹೇಳಿಕೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಪಡಿತರ ಅಕ್ಕಿ ಹಾಗೂ ಇತರ ಅಕ್ಕಿ ವ್ಯತ್ಯಾಸ ಕಂಡುಹಿಡಿಯಲು ನಾನು ಯಾವುದೇ ವಿಶೇಷ ತರಬೇತಿ ಆಗಿಲ್ಲ ಆದರೆ ನಾವು ಬಳಕೆ ಮಾಡಿದ್ದರಿಂದ ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ನಾವು ಬಳಕೆ ಮಾಡಿದ್ದರಿಂದ ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೆಯಲ್ಲಿ ಸ್ಯಾಂಪಲ್ ಮತ್ತು ಸೀಲ್ ಮಾಡಿದರು ಎಂದು ಬರೆಸಿಲ್ಲ ಎಂದರೆ ಸರಿ. ಆ ದಿನ ಯಾವುದೇ ದಾಳಿಗೆ ಹೋಗಿಲ್ಲ ನನ್ನ ಸಮಕ್ಷಮ ಯಾವುದೇ ಅಕ್ಕಿ ಹಾಗೂ ವಾಹನವನ್ನು ಪಂಚನಾಮೆ ಮೂಲಕ ಜಪ್ತು ಪಡಿಸಿಲ್ಲ

ಸಿಸಿ ನಂಃ 4102/2023
ಸಿ.ಡಬ್ಲೂ – 7
ಪಿ.ಡಬ್ಲೂ –7

ಚಾಸಾ.1 ಮತ್ತು 10 ನನ್ನ ಮೇಲಾಧಿಕಾರಿ ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾವು ಎರಿಕೊಪ್ಪ ಕ್ರಾಸ ಹತ್ತಿರ ಹೋಗಿಲ್ಲ ಹಾಗೂ ಅಲ್ಲಿ ಯಾವುದೇ ವಾಹನ ಬಂದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎರಿಕೊಪ್ಪ ಗ್ರಾಮಕ್ಕೆ ಹೋಗಿಲ್ಲ ಆರೋಪಿತರಿಂದ ಅಕ್ಕಿ ಹಾಗೂ ವಾಹನವನ್ನು ಜಪ್ತ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೇ ತಪ್ಪ ಮಾಡದೇ ಇದ್ದರು ಸಹ ಆತನನ್ನು ಹಿಡಿದುಕೊಂಡು ಬಂದು ಸುಳ್ಳು ದೂರು ದಾಖಲಿಸಿದ್ದೆನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಷಯವು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.